PW-01

ಇಂದು ದಿ.24-06-2023 ರಂದು ಸಾಕ್ಷಿಯು ಹಾಜರಿದ್ದು, ಪ್ರಮಾಣ ವಚನ ಮಾಡಿಸಿ, ಪಾಟೀ ಸವಾಲಿಗೆ ಒಳಪಡಿಸಲಾಯಿತು.

ಮುಂದುವರೆದ ಪಾಟೀ ಸವಾಲು :- ಪ್ರತಿವಾದಿಯ ಪರ ವಕೀಲರಿಂದಃ -

ದಿಃ 31-07-1996 ರಲ್ಲಿ ನಮ್ಮ ಕುಟುಂಬದಲ್ಲಿ ಆದ ವಿಭಾಗ ಪತ್ರದಂತೆ ನಾನು ಮತ್ತು ಪ್ರತಿವಾದಿ ಮಾಲೀಕತ್ವ ಮತ್ತು ಸ್ವಾಧೀನಾನುಭವವನ್ನು ಹೊಂದಿದ್ದೇವೆ ಎಂದರೆ ಸರಿ. ನನ್ನ ಭಾಗಾಂಶಕ್ಕೆ ಬಂದ ಆಸ್ತಿಗಳನ್ನು ನಾನು ಮಾರಾಟ ಮಾಡಿಲ್ಲ. ಪ್ರತಿವಾದಿ ತನ್ನ ಭಾಗಾಂಶಕ್ಕೆ ಬಂದ ಆಸ್ತಿಗಳಲ್ಲಿ ಕೆಲವೊಂದು ಆಸ್ತಿಗಳನ್ನು ಮಾರಾಟ ಮಾಡಿದ್ದಾನೆ. ನನ್ನ ಭಾಗಾಂಶಕ್ಕೆ ಬಂದ ಆಸ್ತಿಗಳಲ್ಲಿ ಕೆಲವೊಂದು ಆಸ್ತಿಗಳನ್ನು ಮಾರಾಟ ಮಾಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ನನ್ನ ಮತ್ತು ಪ್ರತಿವಾದಿಯ ವಿರುದ್ಧ ಸರ್ವೇ ನಂ.180 ರಲ್ಲಿ 14 ಗುಂಟೆ ಜಮೀನನ್ನು ಮಾರಾಟ ಮಾಡಿದ್ದೇವೆ ಎಂದು ನನ್ನ ವಿರುದ್ದ ಪ್ರಧಾನ ಸಿವಿಲ್ ನ್ಯಾಯಾಲಯ, ಹೊನ್ನಾಳಿಯಲ್ಲಿ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ರಘು ಮತ್ತು ಸವಿತಾ ಎನ್ನುವವರಿಗೆ ಸರ್ವೇ ನಂ. 180 ರಲ್ಲಿ ತಲಾ 1 ½ ಗುಂಟೆ ಜಮೀನನ್ನು ಮಾರಾಟ ಮಾಡಿದ್ದೇನೆ. ಸರ್ವೇ ನಂ. 180 ಜಮೀನು ದಿಃ 31-07-1996 ರಲ್ಲಿ ನಮ್ಮ ಕುಟುಂಬದಲ್ಲಿ ಆದ ವಿಭಾಗ ಪತ್ರದ ಮೂಲಕ ನನ್ನ ಭಾಗಾಂಶಕ್ಕೆ ಬಂದಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಿಃ 31-07-1996 ರ ಭಾಗಾಂಶದಲ್ಲಿ ನನಗೆ ಸರ್ವೇ ನಂ.181 ಜಮೀನು ಬಂದಿದ್ದು, ನಂತರ ನನ್ನ ಜಮೀನಿನ ಪಕ್ಕದ ಜಮೀನಿನವರಿಗೆ ನನಗೆ ಭಾಗಾಂಶಕ್ಕೆ ಬಂದ ಸರ್ವೇ ನಂ.181 ನ್ನು ಕೊಟ್ಟು ಅವರಿಂದ ಸರ್ವೇ ನಂ. 180 ಜಮೀನನ್ನು ಪಡೆದುಕೊಂಡಿರುತ್ತೇನೆ. ನನ್ನ ತಂಗಿ ನನ್ನ ಮತ್ತು ಪ್ರತಿವಾದಿಯ ವಿರುದ್ಧ ದಿಃ 31-07-1996 ರಲ್ಲಿ ಆದ ನೊಂದಾಯಿತ ವಿಭಾಗ ಪತ್ರವನ್ನು ಪ್ರಶ್ನಿಸಿ ಹರಿಹರ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿದ್ದು, ಸದರಿ ದಾವೆಯಲ್ಲಿ ದಿಃ 31-07-1996 ರಂದು ಆದ ಭಾಗಾಂಶವು ಕಾನೂನು ಸಮ್ಮತವಾದದ್ದು ಎಂದು ಆದೇಶ ಮಾಡಿ ನನ್ನ ತಂಗಿ ಸಲ್ಲಿಸಿದ್ದ ದಾವೆಯನ್ನು ವಜಾ ಮಾಡಿದ್ದಾರೆ ಎಂದರೆ ಸರಿ. ನನ್ನ ತಂಗಿ ಹರಿಹರ ನ್ಯಾಯಾಲಯದಲ್ಲಿ ಆದ ತೀರ್ಪು ಮತ್ತು ಡಿಕ್ರಿಯನ್ನು ಪ್ರಶ್ನಿಸಿ ದಾವಣಗೆರೆ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂಗಿ

ದಾವಣಗೆರೆಯಲ್ಲಿ ಹರಿಹರ ನ್ಯಾಯಾಲಯದಲ್ಲಿ ಆದ ತೀರ್ಪು ಮತ್ತು ಡಿಕ್ರಿಯನ್ನು ಪ್ರಶ್ನಿಸಿ ಮೇಲ್ಮನವಿಯನ್ನು ಸಲ್ಲಿಸಿರುವ ವಿಚಾರ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ನನ್ನ ಮಗನ ಮೂಲಕ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹೊನ್ನಾಳಿ.